MVC No. 607/2019 PW-1

<u>ದಿನಾಂಕ **14.11.2024** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ಃ ಎದುರುದಾರರಾದ ಆರ್ **2** ಪರ ಶ್ರೀ ಎಸ್ ವೈ ಎಸ್ ವಕೀಲರಿಂದ ಃ</u>

ನನಗೆ 40 ವರ್ಷ ವಯಸ್ಸಾಗಿದೆ. ನನ್ನ ಬಳಿ ಆಧಾರ್ ಕಾರ್ಡ್ ಇದೆ ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. ಅಪಘಾತವಾಗುವ ಸಮಯದಲ್ಲಿ ನನಗೆ 44-45 ವರ್ಷ ವಯಸ್ಸಾಗಿತ್ತು ಎಂದರೆ ಸುಳ್ಳು. ನಾನು ಲೈಟಿಂಗ್ ಕೆಲಸ ಮಾಡಿಕೊಂಡಿದ್ದೆ. ಈ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ. ಈಗ ಏನೂ ಕೆಲಸ ಮಾಡುತ್ತಿಲ್ಲ. ಅಪಘಾತವಾದ ದಿನ ನಾನು ಊರಿಗೆ ಹೋಗುತ್ತಿದ್ದೆ. ಸದರಿ ದಿನ ನನ್ನ ಜೊತೆ ಹುಡುಗರು ಇದ್ದರು. ಅಪಘಾತ ಪಡಿಸಿದ ಮೋಟಾರ್ ವಾಹನವನ್ನು ಯಾರು ಚಾಲನೆ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಚಾಲಕ ವಾಹನ ಬಿಟ್ಟು ಹೋಗಿರುತ್ತಾರೆ. ಆಸ್ಪತ್ರೆಯಲ್ಲಿ ಯಾವ ವಾಹನ ಬಂದು ಅಪಘಾತ ಪಡಿಸಿರುತ್ತದೆ ಎಂದು ತಿಳಿಸಿರುತ್ತೇನೆ. ಸದರಿ ದಿನ ಆಸ್ಪತ್ರೆಗೆ ಹೋಗಿ ನಂತರ ದೂರು ನೀಡಿರುತ್ತೇವೆ. ಸದರಿ ದಿನ ಆಸ್ಪತ್ರೆಗೆ ಹೋಗಿ ನಂತರ ಮಾರನೇ ದಿನ ಬಿಡುಗಡೆಯಾಗಿರುತ್ತೇನೆ. ಅಪಘಾತವಾದ ದಿನ ನಾನೇ ವಾಹನ ಚಾಲನೆ ಮಾಡಿಕೊಂಡು ಹೋಗಿ ಡಿಕ್ಕಿ ಪಡಿಸಿರುತ್ತೇನೆಂದರೆ ಸುಳ್ಳು. ನನ್ನ ಬಳಿ ಡಿಎಲ್ ಮತ್ತು ವಿಮಾ ಪಾಲಿಸಿ ಇಲ್ಲ ಎಂದರೆ ಸುಳ್ಳು. ಅಪಘಾತವಾದ 8 ದಿನಗಳ ಬಳಿಕ ರಾಜರಾಜೇಶ್ವರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೋಗಿರುತ್ತೇನೆ. ಅಪಘಾತದಿಂದ ಮೂಳೆ ಮುರಿತ ಆಗಿಲ್ಲ ಎಂದರೆ ಸುಳ್ಳು. ಮೊದಲನೇ ಆಸ್ಪತ್ರೆಯಲ್ಲಿ ಮೂಳೆ ಮುರಿತದ ಬಗ್ಗೆ ನಮೂದು ಇಲ್ಲ ಎಂದರೆ ನಿಜ. ಮೂಳೆ ಮುರಿತದ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ನನಗೆ ಚಿಕಿತ್ಸೆ ನೀಡಿದ ವೈದ್ಯರನ್ನು ಸಾಕ್ಷ್ಯಾ ಮಾಡಿಸುತ್ತೇನೆ. ರಾಜರಾಜೇಶ್ವರಿ ಆಸ್ಪತ್ರೆಯಲ್ಲಿ ಪಡೆದ ಚಿಕಿತ್ಸೆಯ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಚಿಕಿತ್ಸೆಗಾಗಿ ಯಾವಾಗ ಹೋಗಿರುತ್ತೇನೆ ಎಂದು ದಿನಾಂಕ ನೆನಪಿಲ್ಲ. ಅಪಘಾತವಾದ 12 ದಿನಗಳ ನಂತರ ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಚಿಕಿತ್ಸೆಗಾಗಿ ಸೇರಿಕೊಂಡಿರುತ್ತೇನೆಂದರೆ ನಿಜ. ರಾಜರಾಜೇಶ್ವರಿ ಆಸ್ಪತ್ರೆಯ ದಾಖಲೆಗಳನ್ನು

ಹಾಜರುಪಡಿಸಿಲ್ಲ ಎಂದರೆ ಸುಳ್ಳು. ನಾನು ರಾಜರಾಜೇಶ್ವರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿಲ್ಲ. ನನಗೆ ಆದಂತಹ ಮೂಳೆ ಮುರಿತ ಅಪಘಾತದಿಂದ ಆಗಿಲ್ಲ ಎಂದರೆ ಸುಳ್ಳು. ನನ್ನ ವೈದ್ಯಕೀಯ ಚಿಕಿತ್ಸೆಗಾಗಿ 2 ಲಕ್ಷ ರೂಪಾಯಿ ಹಣ ಖರ್ಚಾಗಿದೆ ಎಂದು ಹೇಳಿದ್ದು ಅದು ಸುಳ್ಳು ಎಂದರೆ ಸುಳ್ಳು. ಆ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸುಳ್ಳು. ನನಗೆ ಅಪಘಾತವಾಗುವುದಕ್ಕಿಂತ ಮುಂಚೆ ನಾನು ಕೆಲಸ ಮಾಡಿ ತಿಂಗಳಿಗೆ 20 ಸಾವಿರ ಸಂಪಾದನೆ ಮಾಡುತ್ತಿದ್ದೆ ಎಂದು ಹೇಳಿದ್ದು ಆ ರೀತಿ ಹೇಳಿರುವುದು ಸುಳ್ಳು ಎಂದರೆ ಸುಳ್ಳು. ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸುಳ್ಳು. ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಅರ್ಜಿ ಹಾಕಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

<u>ಮರುವಿಚಾರಣೆ ಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ ಹೇ ಕೇ ಸ ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.